తమిళు మూల: సేతుపతి
**ಕನ್ನಡಕ್ಕೆ: ಕೆ. ನಲ್ಲತಂಬಿ**

ದಿಢೀರೆಂದು ಶೆಂಬಾಯಿಅಪ್ಪತ್ತಾರ ಜ್ಞಾಪಕ ಬಂದಿತು. 'ಸಭ್ಯಸ್ತ ಬರ್ತಿದ್ದಾನೆ. ಚೊಂಬನ್ನು ತೆಗೆದು ಒಳಗಿಡು' ಅನ್ನೋ ಕತೆಯಾಯಿತಲ್ಲ ಎಂದು ಅಮ್ಮನ ಬಳಿ ಚೆಲ್ಲಾಯಿ ಅಜ್ಜಿ ಗಾದೆ ಹೇಳಲಿಕ್ಕೆ ಹೋದದ್ದು ನನ್ನೊಳಗೆ ಶೆಂಬಾಯಿಅಪ್ಪತ್ತಾರ ನೆನಪು ಮೂಡಿಸಿತು. ಅವರು ನನಗೆ ಮಾತ್ರವೇ ಶೆಂಬಾಯಿಅಪ್ಪತ್ತಾ. ಮಿಕ್ಕವರಿಗೆ ಶೆಂಬಿಯಾಚ್ಚಿ. ಅಮ್ಮನಿಗೆ ಶೆಂಬಿಅಕ್ಕ. ಹಾಗೆ ನೋಡಿದರೆ ಶೆಂಬಾಯಿಅಪ್ಪತ್ತಾ ನನಗೆ ದೊಡ್ಡಮ್ಮನ ಸಂಬಂಧವಾಗಬೇಕು. ಈ ಸಂಬಂಧಗಳ ಬಗ್ಗೆ ನನಗೆ ಸದಾ ಗೊಂದಲವೇ. ಅಪ್ಪತ್ತಾ ಎಂದರೆ ಅಪ್ಪನ ತಾಯಿ. ಅಪ್ಪನ ತಾಯಾಗೇ ಇರಬೇಕೆಂಬುದೇನೂ ಇಲ್ಲ. ಅಪ್ಪನ ಸಹೋದರರಾಗಿರುವ ಯಾರನ್ನು ಹೆತ್ತಿದ್ದರೂ ಅವರ ತಾಯಿ ಅಪ್ಪತ್ತಾ ಆಗುತ್ತಾಳೆ. ಅಮ್ಮನೇ 'ಇವರು ನಿನ್ನ ಅಪ್ಪತ್ತಾ' ಅಂತ ಹೇಳಿದ್ದಳು.

ಅಪ್ಪತ್ತಾ ಎಂದ ಕೂಡಲೇ, ಶೆಂಬಾಯಿಅಪ್ಪತ್ತಾಗೆ ಬಹಳ ವಯಸ್ಸಿರಬಹುದು ಎಂದುಕೊಳ್ಳಲಾಗದು. ವಯಸ್ಸಿನಲ್ಲಿ ಅಮ್ಮನಿಗಿಂತ ಕಡಿಮೆ ಎಂದು ಅವರನ್ನು ನೋಡಿದ ಯಾರು ಬೇಕಾದರೂ ಆಣೆ ಮಾಡಿ ಹೇಳಿಯಾರು. ದೇಹವನ್ನು ಹಾಗೆ ಅಚ್ಚುಕಟ್ಟಾಗಿಟ್ಟುಕೊಳ್ಳಲು ಹಲವು ಉಪಾಯಗಳನ್ನು ಬಳಸುತ್ತಾರೆ ಎಂಬುದನ್ನು ಎಂತಹ ಪಳಗಿದವರೂ ಸಹ ಕಂಡುಹಿಡಿಯಲಾಗದಷ್ಟು ಅದು ಸ್ವಾಭಾವಿಕವಾಗಿದೆ. ಹುಟ್ಟಿನಿಂದಲೇ ಬಂದ ರೂಪವೂ ಸ್ವಭಾವವೂ ಅವರ ವಶವಾಗಿತ್ತು. 'ಅವರ ಮನೆಯಲ್ಲಿ ಶೆಂಬಾಯಿಅಕ್ಕ ಮಾತ್ರ ಆ ಬಣ್ಣ' ಎಂದು ಅಮ್ಮ ತನ್ನ ಗೆಳತಿಯರ ಬಳಿ ಹೇಳುವುದನ್ನು ಕೇಳಿದ್ದೇನೆ. ಅಮ್ಮನೂ ತನ್ನನ್ನು ಸ್ವಲ್ಪ ತಿದ್ದಿತೀಡಿಕೊಂಡರೆ ಚೆನ್ನಾಗೇ ಕಾಣುವಳು. ಆದರೆ, ಅವಕ್ಕೆಲ್ಲ ಸಮಯ ಎಲ್ಲಿ? ಗದ್ದೆಯಲ್ಲಿ, ಮನೆಯಲ್ಲಿ, ಬಹಳಷ್ಟು ಕೆಲಸಗಳು. ಶೆಂಬಾಯಿಅಪ್ಪತ್ತಾಗೆ ಆ ರೀತಿಯ ಯಾವ ಕೆಲಸಗಳೂ ಇರುವುದಿಲ್ಲ. ಸದಾ ತನ್ನನ್ನು ಸುಂದರವಾಗಿ ಕಾಣುವಂತೆ ಇಟ್ಟುಕೊಳ್ಳಲು ಸಮಯವೂ ಅವಕಾಶವೂ ಸೌಕರ್ಯಗಳೂ ಅವರಿಗಿತ್ತು. ಅಂದುಕೊಳ್ಳುವುದಕ್ಕಿಂತಲೂ ಹೆಚ್ಚಾದ ರೂಪ ಅವರದು. ಯೌವನ, ಅಚ್ಚುಕಟ್ಟಾದ ಮೈಕಟ್ಟು, ಒತ್ತಿ ಬಾಚಿದ ನೀಳವಾದ ಜಡೆ. ಸದಾ ಮಲ್ಲಿಗೆ ಹೂವನ್ನು ಮುಡಿದುಕೊಳ್ಳುವ ವೈಶಿಷ್ಟ್ಯತೆ.

ನನಗೆ ಈ ಮಲ್ಲಿಗೆಯ ಹೂವಿನ ಸುವಾಸನೆಯ ಇಷ್ಟ ಈ ಅಪ್ಪತ್ತಾರಿಂದಲೇ ಬಂದಿರಬೇಕು. ಅದೇ ರೀತಿ, ಗಾಳಿಯಲ್ಲಿ ಮೆಲ್ಲಗೆ ಹರಡಿ ಬರುವ ಗೋಕುಲ್ ಸ್ಯಾಂಡಲ್ ಪೌಡರಿನ ವಾಸನೆ ಕೂಡ. ಹೀಗೆ ಯಾರಿಂದಲಾದರೂ ಯಾವುದಾದರೂ ಒಂದು ನಮ್ಮ ಬಯಕೆಯಾಗಿ